ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 25-11-2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ:104 (ಹಳೆ ನಂ.83)ರ ವಾರ್ಡ್ ಕಮಿಟಿ ಸಭೆಯನ್ನು ಕಾಡುಗುಡಿ, ಹಾಲು ಡೈರಿ ಪಕ್ಕದಲ್ಲಿ ಹೊಸದಾಗಿ ನಿರ್ಮಿಸಿರುವ ಕಾಡುಗುಡಿ ವಾರ್ಡ್ ಕಛೇರಿಯಲ್ಲಿ ಶ್ರೀ.ಶ್ರೀನಿಧಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ**

- ಶ್ರೀ.ಶ್ರೀನಿಧಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
- ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು.
- ಶ್ರೀ.ಸುರೇಶ್, ಸಹಾಯಕ ಅಭಿಯಂತರರು, ಮೇಜರ್ ರೋಡ್ಸ್
- ಶ್ರೀ.ನಚಿಕೇತ್, ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ
- ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ
- ಶ್ರೀ.ಸಂಧೀಪ್ ಕುಮಾರ್.ಎಲ್, ಕಿರಿಯ ಆರೋಗ್ಯ ನಿರೀಕ್ಷಕರು, ಎಸ್.ಡಬ್ಲ್ಯೂ.ಎಂ
- ಶ್ರೀ.ಪ್ರಭುದಾಸ್, ಜೆ.ಹೆಚ್.ಐ, ಕಾಡುಗುಡಿ
- ಶ್ರೀ.ಮಂಜುನಾಥ.ವಿ, ವರ್ಕ್ ಇನ್ಸ್‌ಪೆಕ್ಟರ್, ಬಿಬಿಎಂಪಿ
- ಶ್ರೀ.ಶಂಕರ್, ವರ್ಕ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ
- ಶ್ರೀ.ಶ್ಯಾಮರಾಜ್, ಗ್ಯಾಂಗ್‌ಮ್ಯಾನ್, ಬಿಬಿಎಂಪಿ

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು**

| | |
|---|---|
| 1. ರುಪಾ ಮೋಹನ್ | 7. ದೀಪು |
| 2. ರವಿ | 8. ಆನಂದ ಕುಮಾರ್ |
| 3. ವಿನಾಯಕ | 9. ಪ್ರದೀಪ್ ರೆಡ್ಡಿ |
| 4. ಹನುಮಾನ ಬಾಬು | 10. ಭಾಗ್ಯಮ್ಮ (ಅಂಗನವಾಡಿ ಕಾರ್ಯಕರ್ತೆ) |
| 5. ಮಂಜುನಾಥ್ ಸಿಂಗ್ | 11. ಸುವರ್ಣ (ಅಂಗನವಾಡಿ ಕಾರ್ಯಕರ್ತೆ) |
| 6. ಸಂಪಂಗಿ | |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು - ಬಿ.ಬಿ.ಎಂ.ಪಿ, ಎ.ಇ.-ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಸಭೆಗೆ ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

*ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.*

1. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಸರ್ಕಲ್ ಬಳಿ ಇರುವ ಬಸ್ ನಿಲ್ದಾಣವನ್ನು ಹಿಂದಕ್ಕೆ ಸ್ಥಳಾಂತರಿಸಲು ಹಾಗೂ ರಸ್ತೆಗಳಲ್ಲಿ ಓಡಾಡುವ ಇನ್ನಿತರೆ ವಾಹನಗಳು ಓಡಾಡಲು ತೊಂದರೇಯಾಗದಂತೆ ಸರಿಪಡಿಸುವಂತೆ ಕೋರಿದರು.

- ಸದರಿ ವಿಷಯಕ್ಕೆ ಶ್ರೀ.ಸುರೇಶ್ ರವರು ಈಗಾಗಲೇ ರಾಜಾಕಾಲುವೆಯ ಕಾಮಗಾರಿಯು ಟೆಂಡರ್ ಪ್ರಕೀಯೇಯು ಮೂಗಿದ್ದಿದ್ದು, ತದ ನಂತರ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ-ಕಾಡುಗುಡಿ ರಸ್ತೆಯಲ್ಲಿ ಸಂತೇ ನಡೆಯುವ ಸಮಯದಲ್ಲಿ ಅಂಗಡಿಯವರು ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿದ್ದು, ಸಾರ್ವಜನಿಕರ ಓಡಾಡಕ್ಕೆ ತುಂಬಾ ತೊಂದರೆಯಾಗುತ್ತಿರುವುದಾಗಿ ಇದನ್ನು ಸರಿಪಡಿಸಿ ಕೊಡಲು ಕೋರಿದರು.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು, ರವರಿಗೆ ತಿಳಿಸುವುದಾಗಿ ಹೇಳಿದರು.

3. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಮುಖ್ಯರಸ್ತೆಯ ಸಿದ್ದಾರ್ಥ ಬಡಾವಣೆಯ ಮುಖ್ಯರಸ್ತೆಯ ತಿರುವಿನಲ್ಲಿ ವಾಹನ ಸಂಚಾರಿಗಳಿಗೆ ಅಡಚಾಡಣೆ ಉಂಟಾಗುತ್ತಿದ್ದು, ಸದರಿ ಸ್ಥಳದಲ್ಲಿ ಟ್ರಾಫೀಕ್ ಸೀಗ್ನಲ್‌ನ್ನು ಅಳವಡಿಸಲು ಕೋರಿದರು.

- ➢ ಸದರಿ ವಿಷಯಕ್ಕೆ ಸಭೆಯಲ್ಲಿ ಟ್ರಾಫೀಕ್ ಪೋಲೀಸ್ ರವರು ಸದರಿ ರಸ್ತೆಯನ್ನು ಅಗಲೀಕರಣ ಮಾಡಿದರೆ ಮಾತ್ರ, ಸದರಿ ಸ್ಥಳದಲ್ಲಿ ಟ್ರಾಫೀಕ್ ಸೀಗ್ನಲ್‌ನ್ನು ಅಳವಡಿಸಲು ಸಾಧ್ಯ ಎಂದು ತಿಳಿಸಿದರು.

4. ವೈಟ್‌ಫೀಲ್ಡ್ ಗ್ಲೋಬಲ್ ಶಾಲೆ ಬಳಿ ಹೊಸದಾಗಿ ಬಸ್ ನಿಲ್ದಾಣ ನಿರ್ಮಿಸಲು ಕೋರಿ.

- ➢ ಸದರಿ ವಿಷಯಕ್ಕೆ ಟ್ರಾಫೀಕ್ ಪೋಲೀಸ್ ರವರು ವಿಷಯದ ಬಗ್ಗೆ ಬಿ.ಎಂ.ಟಿ.ಸಿ ಇಲಾಖೆಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

5. ಎ.ಕೆ.ಜಿ ಕಾಲೋನಿಯಲ್ಲಿ ವಿದ್ಯುತ್ ಕಂಬಗಳು ಹಾಗೂ ಬೀದಿ ದೀಪಗಳನ್ನು ಅಳವಡಿಸಲು ಕೋರಿ.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬೆಸ್ಕಾಂ ಇಲಾಖೆಯ ಅಧಿಕಾರಿಗೆ ವಿದ್ಯುತ್ ಕಂಬಗಳ ಬಗ್ಗೆ ವಿಷಯವನ್ನು ತಿಳಿಸುವುದಾಗಿ ಹಾಗೂ ದೀಪಗಳನ್ನು ಅಳವಡಿಸಲು ಶ್ರೀ.ಶರಥ್, ಸ.ಕಾ.ಅ ವಿಧ್ಯುತ್ ವಿಭಾಗ ಬಿಬಿಎಂಪಿ ರವರಿಗೆ ತಿಳಿಸುವುದಾಗಿ ಹೇಳಿದರು.

6. ಸಿದ್ದಾರ್ಥ ಬಡಾವಣೆಗೆ ಸಂಪರ್ಕ ಕಲ್ಪಿಸಲು ಮ್ಯಾಜಿಕ್ ಬಾಕ್ಸ್ ಅಳವಡಿಸಲು ಈ ಹಿಂದೆ ಹಲವಾರು ಬಾರಿ ಪ್ರಸ್ತಾಪಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ.

- ➢ ಸದರಿ ವಿಷಯದ ಬಗ್ಗೆ ನೋಡಲ್ ಅಧಿಕಾರಿಗಳು, ಸ.ಕಾ.ಅ ಮೇಜರ್ ರೋಡ್ಸ್ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಮಾತನಾಡಿ, ರೈಲ್ವೆ ಇಲಾಖೆಗೆ ಪತ್ರವನ್ನು ಬರೆದು, ಅನುಮತಿ ಕೋರುವಂತೆ ತಿಳಿಸಿದರು.

7. ಚಂದ್ರಸಿಂಗ್ ಬಡಾವಣೆಯಲ್ಲಿ ಈಗಾಗಲೇ ವೆಟ್‌ಮೀಕ್ಸ್ ಹಾಕಿ ಹಲವಾರು ದಿನಗಳಾದರೂ ಡಾಂಬರೀಕರಣ ಮಾಡದಿರುವ ಬಗ್ಗೆ.

- ➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಪ್ರಸ್ತುತ ಬೀಳುತ್ತಿರುವ ಬಾರಿ ಮಳೆಯಿಂದ ಕಾಮಗಾರಿ ವಿಳಂಭವಾಗಿದ್ದು, ಮುಂದಿನ ದಿನಗಳಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

8. ಸಿದ್ದಾರ್ಥ ಬಡಾವಣೆಯಲ್ಲಿ ಕೊಳವೆ ಬಾವಿ ರಿಪೇರಿ ಮಾಡುವ ಬಗ್ಗೆ.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಅಧಿಕಾರಿಗೆ ವಿಷಯವನ್ನು ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

9. ಶ್ರೀ.ಜಯರಾಮ ಸಿಂಗ್ ರವರು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ಕಂದಾಯ ಅಧಿಕಾರಿಗಳಿಂದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

- ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಕಂದಾಯ ಅಧಿಕಾರಿಗಳಿಗೆ ಮುಂದಿನ ಸಭೆಯಲ್ಲಿ ವಿಷಯವನ್ನು ತಿಳಿಸುವುದಾಗಿ ಹೇಳಿದರು.

10. ಇಂಡಿಯನ್ ಗ್ಯಾಸ್ ಗೋಡೌನ್ ರಸ್ತೆ, ಸಿದ್ದಾರ್ಥ ಬಡಾವಣೆ ಮುಖ್ಯ ರಸ್ತೆ ಇಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

- ➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

11.ಎ.ಕೆ.ಜಿ ಕಾಲೋನಿ ಸ್ಮಶಾನದ ಬಳಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

12.ಚನ್ನಸಂದ್ರ ರಸ್ತೆ - United Elysium Apartment ಇಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

13.ಸಿದ್ದಾರ್ಥ ಬಡಾವಣೆಯ ಮುಖ್ಯರಸ್ತೆಯನ್ನು ರೈಲ್ವೆ ಹಳಿ ಕಡೆಗೆ ಮುಂದುವರೆಸಲು ಕೋರಿ.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ಮೇಜರ್ ರೋಡ್ಸ್ ಕಡೆಯಿಂದ ಸದರಿ ಕಾಮಗಾರಿಯನ್ನು ಮುಂದಿನ ದಿನಗಳಲ್ಲಿ ಮಾಡಿಲಾಗುವುದು ಎಂದು ತಿಳಿಸಿದರು.

14.ಎ.ಕೆ.ಜಿ ಕಾಲೋನಿಯಲ್ಲಿ ನೀರಿನ ಅಭಾವ ಇದ್ದು, ನೀರು ಪೂರೈಸಲು ಕೋರಿದರು.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

15.ಕಾಡುಗುಡಿ ರೈಲ್ವೆ ಸ್ಟೇಷನ್ ರಸ್ತೆ ಇಲ್ಲಿ ಸಾರ್ವಜನಿಕರ ಪಾದಚಾರಿಗಳ ಫುಟ್‌ಪಾತ್ ಮೇಲೆ ಅಕ್ರಮವಾಗಿ ಇರುವ ಅಂಗಡಿ ಮುಂಗಟ್ಟುಗಳನ್ನು ತೆರವು ಕಾರ್ಯಚರಣೆ ಮಾಡಲು ಕೋರಿ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸಾರ್ವಜನಿಕರ ಪಾದಚಾರಿಗಳ ಫುಟ್‌ಪಾತ್ ಮೇಲೆ ಅಕ್ರಮವಾಗಿ ಇರುವ ಅಂಗಡಿ ಮುಂಗಟ್ಟುಗಳನ್ನು ತೆರವು ಕಾರ್ಯಚರಣೆ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

16.ಕಾಡುಗುಡಿ ಪಾರ್ಕ್‌ನಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

17.ಎ.ಬಿ. ವಾಜಪೇಯಿ ರಸ್ತೆಯ ಬದಿ ಇರುವ ಡೆಬ್ರೀಸ್/ ಮಣ್ಣನ್ನು ತೆರವುಗೊಳಿಸಲು ಕೋರಿ.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ಮೇಜರ್ ರೋಡ್ಸ್ ರವರು ಮುಂದಿನ ದಿನಗಳಲ್ಲಿ ಮಾಡಿಲಾಗುವುದು ಎಂದು ತಿಳಿಸಿದರು.

18.ವಾರ್ಡ್‌ನಲ್ಲಿ ತುರ್ತು ಅಂಬ್ಯೂಲೆನ್ಸ್‌ನ ಅವಶ್ಯಕತೆ ಇರುವುದಾಗಿ ತಿಳಿಸಿದರು.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಆರೋಗ್ಯಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

19.ಸರ್ಕಾರಿ ಆಸ್ಪತ್ರೆ ಬಳಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

20.ಸಿದಾರ್ಥ ಬಡಾವಣೆ-ಪ್ರದೀಪ್ ರವರ ಮನೆ ಬಳಿ ವಿದ್ಯುತ್ ಯು.ಜಿ ಕೇಬಲ್ ಅಳವಡಿಸಿದ್ದು, ಓಡಾಟಕ್ಕೆ ಅಡಿಯಾಗಿರುವ ಬಗ್ಗೆ ತಿಳಿಸಿದರು.

➢ ಸದರಿ ವಿಷಯಕ್ಕೆ ಬೆಸ್ಕಾಂ ಅಧಿಕಾರಿಗಳು ಸ್ಥಳ ಪರಿವೀಕ್ಷಣೆ ಮಾಡಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

21.ಕಾಡುಗುಡಿ ಸರ್ಕಾರಿ ಶಾಲೆಯ ನಿರ್ವಹಣೆ ಮಾಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂದಿನ ದಿನಗಳಲ್ಲಿ ಸದರಿ ಕಾಮಗಾರಿಯನ್ನು ಮಾಡಿಲಾಗುವುದು ಎಂದು ತಿಳಿಸಿದರು.

22.ಸಿಧಾರ್ಥ ಬಡಾವಣೆಗೆ ಬಸ್ ವ್ಯವಸ್ಥೆ ಕಲ್ಪಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ಟ್ರಾಫೀಕ್ ಪೋಲೀಸ್ ರವರು ವಿಷಯದ ಬಗ್ಗೆ ಬಿ.ಎಂ.ಟಿ.ಸಿ ಇಲಾಖೆಗೆ ಪತ್ರ ಬರೆಯುವುದಾಗಿ ತಿಳಿಸಿದರು.

23.ಮೆಟ್ರೋ ನಿಲ್ದಾಣದ ಹೆಸರುಗಳನ್ನು ಬದಲಾಹಿಸಲು ಕೋರಿ.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬಿ.ಎಂ.ಆರ್.ಸಿ.ಎಲ್ ಇಲಾಖೆಯ ಸಂಬಂಧಪಟ್ಟವರಿಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸುವುದಾಗಿ ಹೇಳಿದರು.

24.ಕಾಡುಗುಡಿ-ಸೀಗೆಹಳ್ಳಿ ಮುಖ್ಯರಸ್ತೆ ಮಾರ್ಗ ಕಾಶಿವಿಶ್ವನಾಥ ದೇವಸ್ಥಾನ ರಸ್ತೆಯಲ್ಲಿ ಇರುವ ಬ್ರಿಟೀಷ್ ಬ್ರಿಡ್ಜ್ ತುಂಬಾ ಹಳೇಯದಾದ ಬ್ರಿಡ್ಜ್‌ಯಾಗಿದ್ದು, ಇದರ ಮುಖಾಂತರ ಭಾರಿ ವಾಹನಗಳು ಚಲಿಸುತ್ತಿರುವುದು ಕಂಡುಬಂದಿದ್ದು, ಇದನ್ನು ಕೂಡಲೇ ನಿಲ್ಲಿಸಲು ಹಾಗೂ Restricted height pole ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ಟ್ರಾಫೀಕ್ ಪೋಲೀಸ್ ರವರು ಮುಂದಿನ ದಿನಗಳಲ್ಲಿ Restricted height pole ಅಳವಡಿಸಲು ಸ್ಥಳ ಪರಿವೀಕ್ಷಣೆ ಮಾಡಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

25.ಪಟಾಲಮ್ಮ ಬಡಾವಣೆಯಲ್ಲಿ ಕುಡಿಯುವ ನೀರಿನ ಅಭಾವ ಇರುವ ಬಗ್ಗೆ.

➢ ಸದರಿ ವಿಷಯಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಉಳಿಕೆ ಲಿಂಕ್ ಅಳವಡಿಸಿದ ನಂತರ ನೀರು ಪೂರೈಸುವುದಾಗಿ ತಿಳಿಸಿದರು.

26.ಅಂಬೇಡ್ಕರ್‌ಗುಟ್ಟ-ರಾಯಲ್ ಮಾರ್ಟ್ ಮುಂಭಾಗದಲ್ಲಿ ಬೂಸ್ಟರ್ ಪಂಪ್‌ಗೆ ಅಳವಡಿಸಿರುವ ಸ್ಲಾಬ್‌ಗಳು ದುರಸ್ತಿಯಲ್ಲಿರುವ ಬಗ್ಗೆ.

➢ ಸದರಿ ವಿಷಯಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ದುರಸ್ತಿಯಾಗಿರುವುದನ್ನು ಬದಲಿಸಲಾಗುವುದು ಎಂದು ತಿಳಿಸಿದರು.

27.ಪಟಾಲಮ್ಮ ಬಡಾವಣೆಯಲ್ಲಿ ಅಂಗನವಾಡಿ ಕಟ್ಟಡದ ಕೊರತೆ ಇದ್ದು, ಹೊಸ ಕಟ್ಟಡವನ್ನು ನಿರ್ಮಿಸಿಕೊಡಲು ಕೋರಿ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಸ್ಥಳ ಪರಿಶೀಲಿಸಿ, ಮುಂದಿನ ದಿನಗಳಲ್ಲಿ ಬರುವ ಅನುದಾನದ ಆದ್ಯತೆಯ ಮೇರೆಗೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸುವುದಾಗಿ ಎಂದು ತಿಳಿಸಿದರು.

28.ಚನ್ನಸಂದ್ರ ರಾಮೇಗೌಡನಗರ ಬಳಿ ಉಪಯೋಗಿಸದ ವಿದ್ಯುತ್ ಕಂಬ ಒಂದು ಅಡ್ಡಿಯಾಗಿರುವುದರಿಂದ, ವಾಹನ ಓಡಾಟಕ್ಕೆ ತೊಂದರೆಯಾಗಿರುವ ಬಗ್ಗೆ.

➢ ಸದರಿ ವಿಷಯಕ್ಕೆ ಬೆಸ್ಕಾಂ ಅಧಿಕಾರಿಗಳು ಸ್ಥಳ ಪರಿವೀಕ್ಷಿಸಿ, ಸೂಕ್ತ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎನ್.ವೆಂಕಟೇಶ್)
ಸಹಾಯಕ ಅಭಿಯಂತರರು
ವಾರ್ಡ್ ನಂ: 104 ಕಾಡುಗುಡಿ

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ